ಸಂಖ್ಯೆ:ಅಕುಕ:ಸಿವಿ(3)ವಿವ/116/09-10. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ,

ಚಿಕ್ಕಮಗಳುರು,ದಿನಾಂಕ:01-03-2010.

<u>ಅಧಿಕೃತ ಜ್ಞಾಪನಾ</u>

ವಿಷಯ : 2010-2011 ನೇ ಸಾಲಿಗೆ ಸರ್ಕಾರಿ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ ತರಬೇತಿಗೆ ಅರ್ಜಿ ಆಹ್ವಾನಿಸುವ ಬಗ್ಗೆ.

ಉಲ್ಲೇಖ:ನಿರ್ದೇಶಕರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು,ಬೆಂಗಳೂರು ಇವರ ಅಧಿಸೂಚನೆ ಸಂಖ್ಯೆ:ಎಂಸಿಟಿ/71/09-10,ದಿ:24-02-2010.

*********

2010-2011 ನೇ ಸಾಲಿಗೆ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ ತರಬೇತಿಗೆ ಆಯ್ಕೆ ಮಾಡಲು ಚಿಕ್ಕಮಗಳುರು ಜಿಲ್ಲೆಯ ಅರ್ಹ ಮಹಿಳಾ ಅಭ್ಯರ್ಥಿಗಳಿಂದ ಅರ್ಜಿ ಅಹ್ವಾನಿಸಲಾಗಿದೆ. ವಿವಿರ ಹಾಗೂ ಮಾಹಿತಿ ಈ ಕೆಳಗಿನಂತಿದ್ದು, ಮೆರಿಟ್ ಕಂ ರೋಸ್ಟರ್ ಪದ್ಧತಿ ಅನುಸರಿಸಿ ಅಭ್ಯರ್ಥಿಗಳ ಆಯ್ಕೆ ಮಾಡಲಾಗುವುದು.

1. ವಿಧ್ಯಾರ್ಹತೆ : ಎಸ್.ಎಸ್.ಎಲ್.ಸಿ
2. ವಯೋಮಿತಿ : ಅರ್ಜಿ ಸಲ್ಲುಸುವ ಕೊನೆಯ ದಿನಾಂಕಕ್ಕೆ ಕನಿಷ್ಠ 18 ವರ್ಷ ಗರಿಷ್ಠ 35 ವರ್ಷ
3. ಕನಿಷ್ಠ 5 ವರ್ಷ ಕರ್ನಾಟಕದಲ್ಲಿ ವ್ಯಾಸಂಗ ಮಾಡಿರುವುದು ಕಡ್ಡಾಯ
4. ಅರ್ಜಿ ಶುಲ್ಕ ರೂ.50/-
5. ಅರ್ಜಿ ವಿತರಣೆ :ದಿ:04-03-2010 ರಿಂದ ದಿ: 26-3-2010 ರ ಸಂಜೆ 5-30 ರೊಳಗೆ
   ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸುವುದು:ದಿ: :ದಿ:05-03-2010 ರಿಂದ ದಿ: 31-3-2010 ರ ಸಂಜೆ 5-30 ರೊಳಗೆ ಮಾತ್ರ.
6. ಮೀಸಲಾತಿ ವಿವರ ಕೆಳಕಂಡಂತಿದೆ:

| ಕ್ರ.ಸಂ | ಮೀಸಲಾತಿ ವಿವರ | ಸಾಮಾನ್ಯ | ಗ್ರಾಮೀಣ | ಕನ್ನಡ ಮಾದ್ಯಮ | ಮಾಜಿ ಸೈನಿಕ | ಯೋಜನಾ ನಿರ್ವಸಿತ | ಒಟ್ಟು |
|---|---|---|---|---|---|---|---|
| 1 | ಸಾಮಾನ್ಯ | 09 | 03 | 01 | 01 | 01 | 15 |
| 2 | ಪರಿಶಿಷ್ಟ ಜಾತಿ | 02 | 01 | 01 | | | 04 |
| 3 | ಪರಿಶಿಷ್ಠ ಪಂಗಡ | | 01 | | | | 01 |
| 4 | ಪ್ರವರ್ಗ-1 | 01 | | | | | 01 |
| 5 | ಪ್ರವರ್ಗ-2ಎ | 03 | 01 | | | | 04 |
| 6 | ಪ್ರವರ್ಗ-2ಬಿ | 01 | 01 | | | | 02 |
| 7 | ಪ್ರವರ್ಗ-3ಎ | | 01 | | | | 01 |
| 8 | ಪ್ರವರ್ಗ-3ಬಿ | 01 | 01 | | | | 02 |
| | ಒಟ್ಟು | 17 | 09 | 02 | 01 | 01 | 30 |

## ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲಾತಿಗಳು :-

ಸೂಚನೆ:- ಅಭ್ಯರ್ಥಿಗಳು ಅರ್ಜಿಯ ಎಲ್ಲಾ ಕಾಲಂಗಳನ್ನು ಕಡ್ಡಾಯವಾಗಿ ಪೂರ್ಣವಾಗಿ ಭರ್ತಿ ಮಾಡತಕ್ಕದ್ದು .

1).ಅಭ್ಯರ್ಥಿಯು ಕಡ್ಡಾಯವಾಗಿ ಸಹಿ ಮಾಡಿದ ಪಾಸ್ ಪೋರ್ಟ್ ಸೈಜಿನ ಭಾವ ಚಿತ್ರವನ್ನು ಅರ್ಜಿಯ ಬಲಭಾಗದ ಮೇಲ್ಭಾಗದಲ್ಲಿ ಅಂಟಿಸಬೇಕು.

2).ರಾಜ್ಯ ಸರ್ಕಾರದ ಪತ್ರಾಂಕಿತ ಅಧಿಕಾರಿಗಳಿಂದ (Gazetted Officer) ದೃಢೀಕರಿಸಿದ ಕೆಳಕಂಡ ದಾಖಲೆಗಳ ನಕಲು ಪ್ರತಿ ಲಗತ್ತಿಸಬೇಕು.

3). ಎಸ್.ಎಸ್.ಎಲ್.ಸಿ. ಅಂಕಪಟ್ಟಿ.

4). ಜನ್ಮ ದಿನಾಂಕ ದಾಖಲೆ (ಎಸ್.ಎಸ್.ಎಲ್.ಸಿ. ಅಂಕಪಟ್ಟಿಯಲ್ಲಿ ಜನ್ಮ ದಿನಾಂಕ ವಿಲ್ಲದಿದ್ದಲ್ಲಿ ಮಾತ್ರ)

5).ವರಮಾನ / ಆದಾಯ ಹಾಗೂ ಜಾತಿ ಪ್ರಮಾಣ ಪತ್ರ

ಜಾತಿ ಪ್ರಮಾಣ ಪತ್ರ : ಪ.ಜಾತಿ / ಪಂಗಡದ ಅಭ್ಯರ್ಥಿಗಳು ನಮೂನೆ " ಡಿ "<br>
ಪ್ರವರ್ಗ-I ರ ವರ್ಗಗಳ ಅಭ್ಯರ್ಥಿಗಳು ನಮೂನೆ " ಇ "ಹಾಗೂ ಇತರೆ<br>
ಹಿಂದುಳಿದ ವರ್ಗಗಳ ಅಭ್ಯರ್ಥಿಗಳು ನಮೂನೆ " ಎಫ್ " ನಲ್ಲೇ ಸಲ್ಲಿಸಬೇಕು.

6).ಸಾಮಾನ್ಯ ವರ್ಗದ ಗ್ರಾಮೀಣ ಅಭ್ಯರ್ಥಿಗಳು ಮೇಲುಸ್ತರಕ್ಕೆ (Creamy layer) ಸೇರಿಲ್ಲವೆಂದು ಸಂಬಂಧಿಸಿದ ತಹಸೀಲ್ದಾರ್ ರಿಂದ ಅನುಬಂಧ-1 ರಲ್ಲಿ ಪಡೆದ ಪ್ರಮಾಣ ಪತ್ರ ಸಲ್ಲಿಸತಕ್ಕದ್ದು.

7). ಕರ್ನಾಟಕ ರಾಜ್ಯ ಸರ್ಕಾರದ ಇಬ್ಬರು ಪತ್ರಾಂಕಿತ ಅಧಿಕಾರಿಗಳಿಂದ ಪಡೆದ ನಡತೆ ಪ್ರಮಾಣ ಪತ್ರ.

8).ಶಾಲೆಯಿಂದ ಪಡೆದ ನಡತೆ ಪ್ರಮಾಣ ಪತ್ರ

9).ಗ್ರಾಮೀಣ ಅಭ್ಯರ್ಥಿ ಪ್ರಮಾಣ ಪತ್ರ (1 ರಿಂದ 10 ನೇ ತರಗತಿಯವರೆಗೆ)

10). ಕನ್ನಡ ಬಾಷೆಯಲ್ಲಿ ವ್ಯಾಸಂಗ ಪ್ರಮಾಣ ಪತ್ರ (1 ರಿಂದ 10 ನೇ ತರಗತಿಯವರೆಗೆ)

11).ವೈದ್ಯಕೀಯ ಪ್ರಮಾಣ ಪತ್ರ (PFC)

12). ವಿವಾಹಿತರಾದಲ್ಲಿ ಗಂಡನ ಒಪ್ಪಿಗೆ ಪತ್ರ.

(ಸಹಿ/-)<br>
ಅಧ್ಯಕ್ಷರು<br>
ಕಿ.ಮ.ಆ.ಸ. ತರಬೇತಿ ಆಯ್ಕೆ ಸಮಿತಿ<br>
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ<br>
ಚಿಕ್ಕಮಗಳೂರು.